# ಇತಿಹಾಸದ ಪುಟಗಳಿಂದ...

# ಕಿಡಿ ಹತ್ತಿಸಿದವರು..

'ಜ್ಯೋತಿಷ್ಮತಿ'



ಶೀರ್ಷಿಕೆ ನೋಡಿ ತಪ್ಪು ಭಾವನೆಗಳು ಬಾರದಿರಲಿ.. ಯಾವುದೋ ಕ್ರಾಂತಿಕಾರಿಗಳ, ಹೋರಾಟಗಾರರ ಅಥವಾ 'ಬುದ್ಧಿಜೀವಿ'ಗಳ ವಿಚಾರವನ್ನಿಲ್ಲಿ ಹೇಳುತ್ತಿಲ್ಲ. ಇಲ್ಲಿ ಹೇಳ ಹೊರಟಿರುವುದು ಕೆಲವು ಮಂದಿ ಭಾರತದ ಐತಿಹಾಸಿಕ ವ್ಯಕ್ತಿಗಳ ಬಗ್ಗೆ. ಒಂದರ್ಥದಲ್ಲಿ ಯಾವುದೋ ಒಬ್ಬ ವ್ಯಕ್ತಿಯ ಬಗೆಗಲ್ಲ.. ಆದರೆ ಒಂದು ಬಗೆಯ ವಿಶಿಷ್ಟ ಮನೋಭಾವವನ್ನು ಹೊಂದಿದ ವಿಶೇಷ ವ್ಯಕ್ತಿಗಳ ಬಗ್ಗೆ.

ಒಂದು ರಾಜ್ಯವನ್ನು, ಅಥವಾ ಇಡೀ ದೇಶವನ್ನು ಆಳುವ ದೊಡ್ಡ ರಾಜನ ಜೀವನ ಇತಿಹಾಸವಾಗುತ್ತದೆ; ಅನೇಕ ವರ್ಷ ಗಳ ವರೆಗೆ ಅವನ ಕೆಲಸಗಳು ನೆನಪಿನಲ್ಲಿ ಉಳಿಯುತ್ತವೆ.

ಆದರೆ ಅವರ ಅಂತರಂಗದ ಜೀವನ ಯಾರ ಗಮನಕ್ಕೂ ಬರುವುದಿಲ್ಲ. ಭಾರತದಲ್ಲಿ ಕೆಲವು ಮಂದಿ ರಾಜರಿದ್ದರು. ಅವರ ಅಂತರಂಗ ಯಾವುದೋ ಕಾರಣದಿಂದ ಬದಲಾಯಿತು; ಅವರಲ್ಲಿ ಶ್ರದ್ಧೆಯ ಕಿಡಿ ಹತ್ತಿತು — ಅದನ್ನು ಅವರು ತಮ್ಮೊಳಗೆ ಮಾತ್ರವೇ ಉರಿಯಲು ಬಿಡದೆ, ಎಲ್ಲೆಡೆ ಹರಡಿದರು. ಇದು ಸಾಮಾನ್ಯವಾದ ಕಿಡಿಯಲ್ಲ; ತಾತ್ಕಾಲಿಕ ಬದಲಾವಣೆಗೆ ಮಾತ್ರ ಕಾರಣವಾಗಲಿಲ್ಲ. ಅನೇಕ ವರ್ಷಗಳ ವರೆಗೂ ಸ್ಫೂರ್ತಿಯ ಕಿಡಿಯಾಯಿತು. ಅದೇ, **ಧಾರ್ಮಿಕ, ಆಧ್ಯಾತ್ಮಿಕ ಶ್ರದ್ಧೆಯ ಕಿಡಿ.** ಅವರ ಈ ಮನೋಧರ್ಮವನ್ನು ಇತಿಹಾಸಕಾರರು ಕೇವಲ ಹೆಸರಿಸುತ್ತಾರೆ ಅಷ್ಟೆ. ಆದರೆ ಅದು ಇಡೀ ದೇಶದ ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ ಜನಜೀವನವನ್ನು ಗಾಢವಾಗಿ ಪ್ರಭಾವಿಸುತ್ತದೆ ಎಂಬುದನ್ನು ಎತ್ತಿ ಹೇಳುವುದಿಲ್ಲ. ಇಂತಹ ಕೆಲವು ವ್ಯಕ್ತಿಗಳನ್ನು ಇಲ್ಲಿ ಗುರುತಿಸಬಹುದು:

### ಜನಕ ಮಹಾರಾಜ

ಬೃಹದಾರಣ್ಯಕ ಉಪನಿಷತ್ತಿನಲ್ಲಿ ಬರುವ ಜನಕ ಮಹಾರಾಜ ದೊಡ್ಡ ಬ್ರಹ್ಮಜ್ಞಾನಿ. ಗೀತೆಯಲ್ಲಿ ಉಲ್ಲೇಖಿತವಾಗಿರುವಂತೆ ಇವನೊಬ್ಬ ಕರ್ಮಯೋಗಿ. ರಾಜನಾಗಿದ್ದುಕೊಂಡು ಅಷ್ಟೊಂದು ಆಧ್ಯಾತ್ಮಿಕ ಉನ್ನತಿಯನ್ನು ಹೇಗೆ ಪಡೆದ? ಗೀತೆಯಲ್ಲಿ ಹೇಳಿದಂತೆ, ಹಿಂದೆ ಬ್ರಹ್ಮಜ್ಞಾನವು ಕ್ಷತ್ರಿಯರಿಗೆ ಮಾತ್ರ ತಿಳಿದಿತ್ತು ಎಂಬುದಕ್ಕೆ ಇದು ಕುರುಹೆ? (ಸ್ವಾಮಿ ವಿವೇಕಾನಂದರು ಕೂಡ ಈ ಅಂಶವನ್ನು ಪುಷ್ಟೀಕರಿಸುತ್ತಾರೆ.) ಈತನು ಶುಕದೇವನಿಗೆ ಬ್ರಹ್ಮಜ್ಞಾನವನ್ನು ಬೋಧಿಸಿದನಂತೆ. ಅದೇ ರೀತಿ ಬ್ರಹ್ಮವಾದಿಗಳನ್ನು ಕರೆಸಿ ಚರ್ಚೆ ನಡೆಸುತ್ತಿದ್ದನೆ. ಶ್ರೇಷ್ಠ ಋಷಿಯಾಗಿದ್ದ ಯಾಜ್ಞವಲ್ಕ್ಯ ಅವನ ಸಭೆಯಲ್ಲಿ ಮಹಾಜ್ಞಾನಿಯಾಗಿ ಘೋಷಿಸಲ್ಪಟ್ಟ.

ಇನ್ನೊಂದೆಡೆ, ರಾಮಾಯಣದಲ್ಲಿ ಸೀತೆಯ ತಂದೆಯಾದ ಜನಕನು ವಿದೇಹ ರಾಜ್ಯದ ಅಧಿಪತಿಯಾಗಿದ್ದ ಎನ್ನಲಾಗಿದೆ. ಈ ಜನಕನು ಉಳುತ್ತಿದ್ದಾಗ ಗದ್ದೆಯಲ್ಲಿ ಸಿಕ್ಕಿದ ಶಿಶುವೇ ಸೀತೆಯಾದಳು. ರಾಜ ಗದ್ದೆ ಉಳುತ್ತಿದ್ದನೇ – ಎಂದು ನಾವು ಬೆರಗಾಗುತ್ತೇವೆ. ಆದರೆ ಆತ ಕರ್ಮಯೋಗಿ, ಮಹಾಜ್ಞಾನಿ. ಇದನ್ನು ನಾವು ಮರೆಯಬಾರದು. ದೇಹಭಾವ ಇಲ್ಲದವನೇ 'ವಿದೇಹ ರಾಜ' ಎಂಬ ಅನ್ವರ್ಥನಾಮವನ್ನೂ ಅವನಿಗೆ ನೀಡಿದ್ದಿದೆ. ಒಟ್ಟಿನಲ್ಲಿ ಜನಕರಾಜನ ಜೀವನವೇ ಒಂದು ರಹಸ್ಯ, ಅಜ್ಞಾತ ವ್ಯಕ್ತಿತ್ವ. ಅಲ್ಲಿಲ್ಲಿ ಸಿಗುವ ಮಾಹಿತಿಗಳು ಮಾತ್ರ ಅಭೂತಪೂರ್ವ, ಅಸಾಧಾರಣ. ಪರಕೀಯ ಆಕ್ರಮಣಗಳನ್ನೇ ವೈಭವೀಕರಿಸುವ ಇತಿಹಾಸಕ್ಕಿಂತ ನಮ್ಮ ನೆಲದಲ್ಲಿ ಹುಟ್ಟಿದ ಇಂತಹ ಮಹಾನ್ ರಾಜರ ಇತಿಹಾಸವನ್ನು ಆಳವಾಗಿ ಅನ್ವೇಷಣೆ ಮಾಡಬಾರದೇಕೆ?

### ಚಂದ್ರಗುಪ್ತ ಮೌರ್ಯ, ಅಶೋಕ

ಆಚಾರ್ಯ ಚಾಣಕ್ಯನ ಮಾರ್ಗದರ್ಶನದಿಂದ ಬೃಹತ್ ಸಾಮ್ರಾಜ್ಯವನ್ನು ಕಟ್ಟಿದ ಚಂದ್ರಗುಪ್ತ ಮೌರ್ಯ ತನ್ನ ಕೊನೆಗಾಲದಲ್ಲಿ ಜೈನಧರ್ಮವನ್ನು ಸ್ವೀಕರಿಸಿ, ಧಾರ್ಮಿಕ ಜೀವನವನ್ನು ನಡೆಸಿದನೆಂಬುದು ಇತಿಹಾಸದಲ್ಲಿ ದಾಖಲಾಗಿದೆ. ಆದರೆ ಯಾವ ಇತಿಹಾಸವೂ ಅವನ ಧಾರ್ಮಿಕ ಪರಿವರ್ತನೆ, ಅವನ ತಪಸ್ಸು ಇತ್ಯಾದಿಗಳನ್ನು ಹೆಚ್ಚು ಒತ್ತುಕೊಟ್ಟು ಹೇಳದೆ, ಅವನ ದಂಡಯಾತ್ರೆ, ಆಳ್ವಿಕೆ ಇವನ್ನೇ ವೈಭವೀಕರಿಸುತ್ತವೆ.

ಅಶೋಕನ ಮನಃಪರಿವರ್ತನೆ, ಬೌದ್ಧಧರ್ಮಕ್ಕೆ ಅವನ ಕೊಡುಗೆ ಇವನ್ನು ಇತಿಹಾಸ ಹಾಡಿಹೊಗಳುತ್ತದೆ. ಇತಿಹಾಸ ರಚನೆಗೆ ಸಾಕಷ್ಟು ದಾಖಲೆಗಳು ಲಭಿಸಿದ್ದರಿಂದಲೂ ಇದು ಸಮರ್ಥನೀಯವೆನ್ನಬಹುದು; ಆದರೆ ಇಂತಹ ಅನೇಕ ಮಂದಿ ರಾಜರು ನಮ್ಮಲ್ಲಿದ್ದರು ಎಂಬುದನ್ನು ಇತಿಹಾಸಕಾರರು ಮರೆಮಾಚುವರೆ? ಕುಲಶೇಖರ ಆಳ್ವಾರ್ ರಾಜನಾಗಿದ್ದ; ಆತ ಪರಮ ಭಕ್ತನೂ ಆಗಿದ್ದ. ಶಿವಾಜಿ ಅಪ್ರತಿಮ ವೀರನಾಗಿದ್ದ, ಮಹಾನ್ ಆಡಳಿತಗಾರನಾಗಿದ್ದ, ಅಷ್ಟೇ ಧಾರ್ಮಿಕ ವ್ಯಕ್ತಿಯಾಗಿದ್ದ. ಒಟ್ಟಿನಲ್ಲಿ, ಇತಿಹಾಸವೆಂದರೆ ಲೌಕಿಕ ಪ್ರಪಂಚದ ದಾಖಲೆ ಮಾತ್ರ ಎಂಬ ಭಾವನೆ ಮೂಡಿಸಲಾಗಿದೆ. ಇದೇ ದುರಂತ.